ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೫

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತಾರನೇ ಅಧಿವೇಶನ**

**ಸೋಮವಾರ, ದಿನಾಂಕ: ೧೮ನೇ ಆಗಸ್ಟ್, ೨೦೨೫**

---

**ಸಮೂಹ – I**

೧. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

೨. ಇಂಧನ ಸಚಿವರು

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

೪. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

೫. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು

೬. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

೭. ಉನ್ನತ ಶಿಕ್ಷಣ ಸಚಿವರು

---

## ರಾಜ್ಯದಲ್ಲಿ ಹೃದ್ರೋಗ ಸಮಸ್ಯೆಗಳು ಹೆಚ್ಚಾಗಿ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಹೆಚ್ಚಿನ ರೋಗಿಗಳು ಭೇಟಿ ನೀಡುತ್ತಿರುವ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೧ (೭೪೦) ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೃದ್ರೋಗ ಸಮಸ್ಯೆಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಹೃದ್ರೋಗ ಸಮಸ್ಯೆಯನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಮಂಜೂರಾಗಿರುವ ಒಟ್ಟು ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ; ಪ್ರಸ್ತುತ ಖಾಲಿ ಇರುವ ಹುದ್ದೆಗಳು ಎಷ್ಟು ; (ವಿವರ ನೀಡುವುದು)

(ಇ) ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಈ) ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಪ್ರಸ್ತುತ ಒಟ್ಟು ಎಷ್ಟು ಭದ್ರತಾ ಮತ್ತು ಸ್ವಚ್ಛತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ; (ಸಂಪೂರ್ಣ ವಿವರ ನೀಡುವುದು)

(ಉ) ಈ ಸಂಸ್ಥೆಯಲ್ಲಿ ಯಾವ ಯಾವ ಏಜೆನ್ಸಿಗಳಿಂದ ಎಷ್ಟೆಷ್ಟು ಭದ್ರತಾ ಮತ್ತು ಸ್ವಚ್ಛತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಸದರಿ ಏಜೆನ್ಸಿಯವರು ಎಷ್ಟು ವರ್ಷಗಳಿಂದ ಸೇವೆಯನ್ನು ನೀಡುತ್ತಾ ಬಂದಿರುತ್ತಾರೆ ; (ವಿವರ ನೀಡುವುದು)

(ಊ) ಇತ್ತೀಚಿನ ದಿನಗಳಲ್ಲಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಭದ್ರತಾ ಮತ್ತು ಸ್ವಚ್ಛತಾ ಸೇವೆಯನ್ನು ನೀಡಲು ಟೆಂಡರ್ ಕರೆಯಲಾಗಿದೆಯೇ ; (ವಿವರ ನೀಡುವುದು)

(ಋ) ಎಷ್ಟು ವರ್ಷಗಳಿಗೆ ಒಮ್ಮೆ ಟೆಂಡರ್ ಕರೆಯಲಾಗುವುದು ಹಾಗೂ ಟೆಂಡರ್‌ನಲ್ಲಿ ಏಜೆನ್ಸಿಯನ್ನು ಆಯ್ಕೆ ಮಾಡುವ ಮಾನದಂಡಗಳು ಯಾವುವು ? (ಸಂಪೂರ್ಣ ಮಾಹಿತಿ ನೀಡುವುದು)

## ನಂಜನಗೂಡು ತಾಲ್ಲೂಕು ಆಸ್ಪತ್ರೆಯಲ್ಲಿ ಟ್ರಾಮಾ ಸೆಂಟರ್ ಸ್ಥಾಪಿಸುವ ಕುರಿತು

**ಡಾ: ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೬೨ (೭೭೬) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಂಜನಗೂಡು ತಾಲ್ಲೂಕು ಆಸ್ಪತ್ರೆಯಲ್ಲಿ ಟ್ರಾಮಾ ಸೆಂಟರ್ ಅನ್ನು ಆರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ ; ಇದ್ದಲ್ಲಿ ವಿವರ ಒದಗಿಸುವುದು ;

(ಆ) ಈ ತಾಲ್ಲೂಕು ಆಸ್ಪತ್ರೆಯಲ್ಲಿ ಟ್ರಾಮಾ ಸೆಂಟರ್‌ನ್ನು ಸ್ಥಾಪಿಸಲು ಜಾಗದ ಅವಶ್ಯಕತೆಯಿದ್ದು, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಸಿಂಧನೂರು ತಾಲ್ಲೂಕಿನ ರೈತರಿಗೆ ೧೦ ಗಂಟೆಗಳ ಕಾಲ ವಿದ್ಯುತ್ ಪೂರೈಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೬೩ (೭೦೩) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಅತೀ ಹೆಚ್ಚು ಭತ್ತ ಬೆಳೆಯುತ್ತಿರುವುದರಿಂದ ರೈತರಿಗೆ ಸುಮಾರು ೧೦ ಗಂಟೆಗಳ ಕಾಲ ವಿದ್ಯುತ್ ಪೂರೈಸಲು ಸರ್ಕಾರದ ಪ್ರಸ್ತಾವನೆ ಇದೆಯೇ ;

(ಆ) ಇದ್ದಲ್ಲಿ, ಇದರ ಕುರಿತು ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ;

(ಇ) ಸಿಂಧನೂರು ತಾಲ್ಲೂಕು ವಿದ್ಯುತ್ ಉಪವಿಭಾಗಕ್ಕೆ ಕ್ರೇನ್ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

# ರಾಜ್ಯದಲ್ಲಿ ಉಂಟಾಗುತ್ತಿರುವ ಹಠಾತ್ ಹೃದಯಾಘಾತ ಪ್ರಕರಣಗಳ ಬಗ್ಗೆ

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) –**

೬೪ (೬೯೩) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ೪೫ ವರ್ಷಕ್ಕಿಂತ ಕಡಿಮೆ ವಯಸ್ಸಿನವರಲ್ಲಿ ಹಠಾತ್ ಹೃದಯಾಘಾತ ಮತ್ತು ಅದರಿಂದಾಗಿ ಸಾವುಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಕಳೆದ ೩ ವರ್ಷಗಳಲ್ಲಿ ಸಂಭವಿಸಿರುವ ಹೃದಯಾಘಾತ ಪ್ರಕರಣಗಳ ಹಾಗೂ ಇದರಿಂದ ಮೃತಪಟ್ಟವರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ರಾಜ್ಯದ ಯುವ ಸಮುದಾಯದಲ್ಲಿ ಹೃದಯಾಘಾತ/ತೀವ್ರ ಹೃದಯಾಘಾತದಿಂದ ಸಾವಿನ ಪ್ರಕರಣಗಳು ಹೆಚ್ಚುತ್ತಿದ್ದು, ಇದಕ್ಕೆ ಕಾರಣಗಳೇನು ;

(ಈ) ರಾಜ್ಯದ ಎಷ್ಟು ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಹೃದಯಾಘಾತ/ತೀವ್ರ ಹೃದಯಾಘಾತ ಸಂಭವಿಸಿದಾಗ ಕೊರೊನರಿ ಸ್ಟಂಟ್ ಮತ್ತು ಕಾರ್ಡಿಯಲ್ ಬೈಪಾಸ್ ಸರ್ಜರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ ;

(ಉ) ರಾಜ್ಯದಲ್ಲಿ ಹೆಚ್ಚುತ್ತಿರುವ ಹೃದಯಾಘಾತ ಮತ್ತು ಹೃದಯ ಸ್ತಂಭನ ಪ್ರಕರಣಗಳಿಂದ ಸಾರ್ವಜನಿಕರು ತೀವ್ರ ಆತಂಕಕ್ಕೊಳಗಾಗಿದ್ದು, ಈ ಗಂಭೀರ ವಿಷಯದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

# ಹೊಸ ಪಡಿತರ ಚೀಟಿಗಳನ್ನು ವಿತರಿಸುವಲ್ಲಿ ವಿಳಂಬವಾಗಿರುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನಸಭೆಯಿಂದ ಚುನಾಯಿತರಾದವರು) –**

**ಡಾ: ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೬೫ (೬೩೭+೮೧೧) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಾವಿರಾರು ಮಂದಿ ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿ ವರ್ಷಗಳೆ ಕಳೆದಿದ್ದರೂ, ಇದುವರೆಗೂ ಅವರಿಗೆ ವಿತರಿಸದೆ ಇರುವುದರಿಂದ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನಲ್ಲಿ ವಿತರಿಸಿರುವ ಹೊಸ ಪಡಿತರ ಚೀಟಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಸಾವಿರಾರು ಮಂದಿ ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ್ದು, ಇದುವರೆವಿಗೂ ಅವರಿಗೆ ಲಭ್ಯವಾಗದಿರಲು ಕಾರಣವೇನು ;

(ಈ) ಪಡಿತರ ಚೀಟಿ ಲಭ್ಯವಾಗದೇ ಇರುವ ಅರ್ಜಿದಾರರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಉ) ಹೊಸ ಪಡಿತರ ಚೀಟಿಗಳನ್ನು ಸಕಾಲದಲ್ಲಿ ವಿತರಣೆ ಮಾಡದಿರುವುದರಿಂದ, ಅರ್ಜಿದಾರರು ಸರ್ಕಾರದ ಯೋಜನೆ ಮತ್ತು ಸವಲತ್ತುಗಳ ಲಾಭ ಪಡೆಯುವುದರಿಂದ ವಂಚಿತರಾಗುತ್ತಿದ್ದು, ಇದನ್ನು ತಪ್ಪಿಸಲು ಸರ್ಕಾರ ಏನು ಕ್ರಮ ವಹಿಸಿದೆ ;

(ಊ) ಬಂದಿದ್ದಲ್ಲಿ, ಏನು ಕ್ರಮ ತೆಗೆದುಕೊಳ್ಳಲಾಗಿದೆ ; ವಿತರಣೆಗೆ ಯಾವಾಗ ಕ್ರಮ ವಹಿಸಲಾಗುವುದು ? (ವಿವರ ನೀಡುವುದು)

## ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿನ ಫಿಜಿಯೋಥೆರಪಿ ಸೇವೆಯ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೬೬ (೭೨೩) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಎಷ್ಟು ಜಿಲ್ಲಾ/ತಾಲ್ಲೂಕು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ ; (ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಇರುವ ಜಿಲ್ಲಾ/ತಾಲ್ಲೂಕು ಆಸ್ಪತ್ರೆಗಳಲ್ಲಿ ಎಷ್ಟು ಆಸ್ಪತ್ರೆಗಳಲ್ಲಿ ಫಿಜಿಯೋಥೆರಪಿ ಸೇವೆಯನ್ನು ಒದಗಿಸಲಾಗುತ್ತಿದೆ ;

(ಇ) ಬಹುತೇಕ ಆಸ್ಪತ್ರೆಗಳಲ್ಲಿ ಗಾಯಾಳುಗಳು, ಅನಾರೋಗ್ಯದವರು ಹಾಗೂ ಅಂಗವಿಕಲರು ಫಿಜಿಯೋಥೆರಪಿ ಸೇವೆ ಇಲ್ಲದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಸದರಿ ಜಿಲ್ಲಾ/ತಾಲ್ಲೂಕು ಆಸ್ಪತ್ರೆಗಳಲ್ಲಿ ಈ ಸೇವೆಯನ್ನು ಒದಗಿಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ ?

## ವಿವಿಧ ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭಿಸಿರುವ ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತಿರುವ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೭ (೭೫೫) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ವಿಶ್ವವಿದ್ಯಾನಿಲಯಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಬೆಂಗಳೂರು ನಗರ ಜಿಲ್ಲೆಯಲ್ಲಿ ಎಷ್ಟು ವಿಶ್ವವಿದ್ಯಾಲಯಗಳಿವೆ ;

(ಇ) ಸರ್ಕಾರದ ಅಧೀನದಲ್ಲಿರುವ ಒಟ್ಟು ವಿಶ್ವವಿದ್ಯಾನಿಲಯಗಳ ಸಂಖ್ಯೆ ಎಷ್ಟು ;

(ಈ) ಹಿಂದಿನ ಸರ್ಕಾರದಲ್ಲಿ ಜಿಲ್ಲೆಗೊಂದರಂತೆ ಎಷ್ಟು ಹೊಸ ವಿಶ್ವವಿದ್ಯಾನಿಲಯಗಳನ್ನು ತೆರೆಯಲಾಗಿದೆ ; ಈ ವಿಶ್ವವಿದ್ಯಾನಿಲಯಗಳನ್ನು ಯಾವ ಮಾನದಂಡಗಳನ್ನು ಅನುಸರಿಸಿ ಪ್ರಾರಂಭಿಸಲಾಗಿದೆ ; (ವಿವರ ನೀಡುವುದು)

(ಉ) ಅಂತಹ ಕೆಲವು ವಿಶ್ವವಿದ್ಯಾನಿಲಯಗಳನ್ನು ಮುಚ್ಚಲು ಸರ್ಕಾರ ತೀರ್ಮಾನಿಸಿದೆಯೇ ; ಹಾಗಿದ್ದಲ್ಲಿ, ಯಾವ ಮಾನದಂಡಗಳ ಮೇಲೆ ಈ ತೀರ್ಮಾನ ತೆಗೆದುಕೊಳ್ಳಲಾಗುತ್ತಿದೆ ; (ವಿವರ ನೀಡುವುದು)

(ಊ) ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಯಾ ಜಿಲ್ಲೆಯಲ್ಲಿ ಸರ್ಕಾರಿ ಜಮೀನು ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯವಿರುವ ವಿಶ್ವವಿದ್ಯಾನಿಲಯಗಳನ್ನು ಮುಂದುವರೆಸಲು ಸರ್ಕಾರಕ್ಕಿರುವ ತೊಂದರೆಗಳೇನು ? (ವಿವರ ನೀಡುವುದು)

## ಯಲ್ಲಾಪುರದ ಕಾಳಮ್ಮನಗರದ ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲದಿರುವ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೬೮ (೭೬೦) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕಿನ ಯಲ್ಲಾಪುರದ ಕಾಳಮ್ಮ ನಗರದಲ್ಲಿರುವ ಪರಿಶಿಷ್ಟ ಪಂಗಡದ ಮತ್ತು ಇತರೆ ಸಮುದಾಯಗಳ ಕೆಲವು ಮನೆಗಳಿಗೆ ಇಲ್ಲಿಯವರೆಗೂ ವಿದ್ಯುತ್ ಸಂಪರ್ಕ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರ ಆದ್ಯತೆಯ ಮೇರೆಗೆ ಸದರಿ ಮನೆಗಳಿಗೆ ವಿದ್ಯುತ್ ಕಲ್ಪಿಸಲು ತೆಗೆದುಕೊಳ್ಳುವ ಕ್ರಮಗಳು ಮತ್ತು ಯಾವ ಕಾಲಮಿತಿಯೊಳಗೆ ಇದನ್ನು ಪೂರ್ಣಗೊಳಿಸಲಾಗುವುದು ?

## ಖಾಸಗಿ ವಿಶ್ವವಿದ್ಯಾಲಯಗಳು ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೬೯ (೬೪೫) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವೃತ್ತಿಪರ ಕೋರ್ಸುಗಳ ಪ್ರವೇಶಾತಿಯಲ್ಲಿ ಸರ್ಕಾರಿ ಕೋಟಾದ ಶೇ.೪೦ರಷ್ಟು ಸೀಟುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ಖಾಸಗಿ ವಿಶ್ವವಿದ್ಯಾಲಯಗಳು ನಿಯಮಬಾಹಿರವಾಗಿ ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ; ವಿ.ಟಿ.ಯು ನಿಗದಿಪಡಿಸಿರುವ ಶುಲ್ಕವೆಷ್ಟು ; ಹೆಚ್ಚುವರಿ ಶುಲ್ಕದ ಬಗ್ಗೆ ವಿದ್ಯಾರ್ಥಿಗಳು ಮತ್ತು ಪಾಲಕರಿಂದ ಕೆಇಎಗೆ ಮತ್ತು ಸರ್ಕಾರಕ್ಕೆ ದೂರುಗಳು ಬಂದಿದೆಯೇ ;

(ಇ) ಹೆಚ್ಚುವರಿ ಶುಲ್ಕ ಪಡೆಯುವುದು ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸೀಟು ಹಂಚಿಕೆ ಮತ್ತು ಶುಲ್ಕ ನಿಯಂತ್ರಣ ಕಾಯ್ದೆ ಹಾಗೂ ಯುಜಿಸಿ ಮಾರ್ಗಸೂಚಿ ನಿಯಮಗಳ ವಿರುದ್ಧವಾಗಿರುವುದಿಲ್ಲವೇ ;

(ಈ) ನಿಯಮ ಉಲ್ಲಂಘಿಸಿದ ಸಂಸ್ಥೆಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ? (ಸಂಸ್ಥೆಗಳ ಪೂರ್ಣ ವಿವರಗಳನ್ನು ಒದಗಿಸುವುದು)

## ಸರ್ಕಾರಿ ಶಾಲೆಗಳಲ್ಲಿ ಉಚಿತ ಪ್ರವೇಶಾತಿ ನೀಡುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೦ (೪೫) ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದೆಹಲಿ ಸರ್ಕಾರವು ಜಾತಿ–ಮತ ಗಣನೆಗೆ ತೆಗೆದುಕೊಳ್ಳದೇ ೧ ರಿಂದ ೧೨ನೇ ತರಗತಿಯವರೆಗಿನ ಎಲ್ಲಾ ಮಕ್ಕಳಿಗೆ ಸರ್ಕಾರಿ ಶಾಲೆಯಲ್ಲಿ ಉಚಿತ

ವಿದ್ಯಾಭ್ಯಾಸದ ಅವಕಾಶವನ್ನು ಕಲ್ಪಿಸಿದ್ದು, ಸದರಿ ಯೋಜನೆಯನ್ನು ಕರ್ನಾಟಕದಲ್ಲಿ ಪರಿಚಯಿಸಿದಲ್ಲಿ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದರ ಬಗ್ಗೆ ಸರ್ಕಾರ ಚಿಂತಿಸಿದೆಯೇ ;

(ಆ) ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಮಕ್ಕಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದ್ದು, ಮಕ್ಕಳೆಲ್ಲಾ ಖಾಸಗಿ ಶಾಲೆಗೆ ಪ್ರವೇಶಾತಿಯನ್ನು ಪಡೆಯುತ್ತಿರುವುದರಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ; (ಸಂಪೂರ್ಣವಾದ ಮಾಹಿತಿಯನ್ನು ನೀಡುವುದು)

(ಇ) ಕಳೆದ ೩ ವರ್ಷದಿಂದ ಇಲ್ಲಿಯವರೆಗೂ ೧ ರಿಂದ ೧೦ನೇ ತರಗತಿವರೆಗೂ ಸರ್ಕಾರಿ ಶಾಲೆಗಳಿಗೆ ಪ್ರವೇಶಾತಿ ಪಡೆದಿರುವ ಹಾಗೂ ಖಾಸಗಿ ಶಾಲೆಗಳಿಗೆ ಪ್ರವೇಶಾತಿ ಪಡೆದಿರುವ ಮಕ್ಕಳ ಸಂಖ್ಯೆ ಎಷ್ಟು ; (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ಕಳೆದ ೩ ವರ್ಷದಿಂದ ಇಲ್ಲಿಯವರೆಗೂ ಎಷ್ಟು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ ಹಾಗೂ ದತ್ತು ಪಡೆದಿರುವ ಶಾಲೆಗಳ ಸಂಖ್ಯೆ ಎಷ್ಟು ? (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು)

## ರಾಜ್ಯದಲ್ಲಿನ ವನ್ಯ ಜೀವಿಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೭೧ (೭೮೪) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವನ್ಯ ಜೀವಿಗಳ ಸಂತತಿ ಹೆಚ್ಚಾಗುತ್ತಿರುವುದು ಸಂತಸದ ಸಂಗತಿಯಾಗಿದ್ದು, ಈ ವನ್ಯಜೀವಿಗಳ ಗಣತಿ ಕಾರ್ಯದ ವಿವರಗಳೇನು ; ವನ್ಯಜೀವಿಗಳ ಸಂಖ್ಯೆ ಹೆಚ್ಚಾದಂತೆ ಅವುಗಳ ಓಡಾಟ ಮತ್ತು ಆಹಾರದ

ಪ್ರಕ್ರಿಯೆ ಮೇಲಾಗುವ ಪರಿಣಾಮದ ಅಧ್ಯಯನ ನಡೆದಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಮುಂದಿನ ಮೂವತ್ತು ವರ್ಷದಿಂದ ೫೦ ವರ್ಷಗಳಿಗೆ ಯೋಚಿಸಿ, ಶಾಶ್ವತ ಯೋಜನೆಗಳನ್ನು ರೂಪಿಸಲು ಚರ್ಚಿಸಲು ತಜ್ಞರ ಸಮಿತಿಯನ್ನು ರಚಿಸಲಾಗಿದೆಯೇ ; ವನ್ಯ ಜೀವಿಗಳ ಸಂಖ್ಯೆಯು ಹೆಚ್ಚಳವಾಗಿ ಮಾನವರ ಸಂಖ್ಯೆಯು ಹೆಚ್ಚಳವಾಗಿರುವುದರಿಂದ ಉಂಟಾದ ಪರಿಣಾಮಗಳನ್ನು ಎದುರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಲ್ಲಿ ಯಾವ ಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿ ಸಂಘರ್ಷ ಕಡಿಮೆ ಮಾಡುವಲ್ಲಿ ಸಹಕಾರಿಯಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಮಾನವ ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟವರಿಗೆ ಸರ್ಕಾರ ನೀಡುವ ಪರಿಹಾರದ ಮೊತ್ತವೆಷ್ಟು ; ಈ ವರ್ಷದಲ್ಲಿ ವಿತರಿಸಿರುವ ಪರಿಹಾರದ ಮೊತ್ತ ಮತ್ತು ವ್ಯಕ್ತಿಗಳ ಸಂಪೂರ್ಣ ವಿವರ ನೀಡುವುದು ; ಇತ್ತೀಚೆಗೆ ಐದು ಹುಲಿಗಳ ಸಾವಿನ ನಂತರ ಈ ರೀತಿಯ ಘಟನೆಗಳು ಮರುಕಳಿಸದಂತೆ ಸರ್ಕಾರ ಕೈಗೊಂಡಿರುವ ದೀರ್ಘಕಾಲೀನ ಯೋಜನೆಗಳು ಯಾವುವು ; ಮತ್ತು ಹುಲಿ ಸಂರಕ್ಷಣಾ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಸಮಗ್ರ ಕಾರ್ಯಕ್ರಮಗಳು ಯಾವುವು ? (ಸಂಪೂರ್ಣ ಮಾಹಿತಿ ನೀಡುವುದು)

## ದೈಹಿಕ ಶಿಕ್ಷಕರ ಹುದ್ದೆಯ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೭೨ (೭೦೧) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೨೧–೨೨ನೇ ಸಾಲಿನಲ್ಲಿ ಮರು ಹೊಂದಾಣಿಕೆ ಸಮಯದಲ್ಲಿ ಆಯಾ ಜಿಲ್ಲೆಗಳಲ್ಲಿ ಮಂಜೂರಾಗಿದ್ದ ದೈಹಿಕ ಶಿಕ್ಷಕರ ಹುದ್ದೆಯನ್ನು ಬೇರೆ ಜಿಲ್ಲೆಗೆ ಸ್ಥಳಾಂತರ ಮಾಡದೆ ಅದೇ ಜಿಲ್ಲೆಯಲ್ಲಿ ಖಾಲಿ ಹುದ್ದೆಗಳನ್ನು

ಮುಂದುವರೆಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ಹಾಗೂ ಕಾಲಮಿತಿ ಎಷ್ಟು ;

(ಆ) ಸೇವಾ ಅವಧಿಯ ಕೊನೆವರೆಗೂ ದೈಹಿಕ ಶಿಕ್ಷಕರು ವರ್ಗಾವಣೆಯಿಂದ ವಂಚಿತರಾಗಿದ್ದು, ಸದರಿ ಶಿಕ್ಷಕರ ವರ್ಗಾವಣೆ ಮತ್ತು ಹೆಚ್ಚುವರಿ ಮರು ಹೊಂದಾಣಿಕೆ ಬಗ್ಗೆ ಸರ್ಕಾರದ ನಿಲುವುಗಳೇನು ;

(ಇ) ಬಹಳ ವರ್ಷಗಳಿಂದ ೨೦೦ ವಿದ್ಯಾರ್ಥಿಗಳಿಗೆ ನಿಗದಿಯಾಗಿದ್ದ ದೈಹಿಕ ಶಿಕ್ಷಕರ ಹುದ್ದೆಯನ್ನು ೫೦-೧೦೦ ವಿದ್ಯಾರ್ಥಿಗಳಿಗೆ ಮರು ನಿಗದಿ ಮಾಡುವ ನಿಟ್ಟಿನಲ್ಲಿ ಸರ್ಕಾರ ಕ್ರಮ ವಹಿಸಲಾಗುವುದೇ ಮತ್ತು ಕಾಲಮಿತಿ ಎಷ್ಟು ; ಹೆಚ್ಚುವರಿ ಪ್ರಕ್ರಿಯೆಯಲ್ಲಿ ಜಿಲ್ಲಾ ಘಟಕವನ್ನು ಮಾಡದೆ ತಾಲ್ಲೂಕಿನಲ್ಲಿ ಇಳಿಕೆ ಕ್ರಮಾಂಕ ಮಾಡಿ ತಾಲ್ಲೂಕು ಘಟಕ ಮಾಡುವ ಸಂಬಂಧ ಯಾವ ಕಾಲಮಿತಿಯನ್ನು ಸರ್ಕಾರ ಕ್ರಮ ಕೈಗೊಳ್ಳುವುದು ;

(ಈ) ರಾಜ್ಯದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ೬೭೭೨ ಹುದ್ದೆಗಳು ಮಾತ್ರ ಮಂಜೂರಾಗಿದ್ದು, ಎಚ್.ಪಿ.ಎಸ್. ಶಾಲೆಗಳ ಸಂಖ್ಯೆ ೨೧ ಸಾವಿರಕ್ಕೂ ಅಧಿಕ ಇದ್ದು, ಇದರಿಂದ ಕ್ರೀಡಾ ಚಟುವಟಿಕೆ ಕ್ರೀಡಾಕೂಟ ಹಾಗೂ ದೈಹಿಕ ಶಿಕ್ಷಣ ಕಲಿಕೆಯಿಂದ ಆ ತಾಲ್ಲೂಕಿನ ಮಕ್ಕಳು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ದೈಹಿಕ ಶಿಕ್ಷಕರನ್ನು ನೇಮಿಸುವ ಸಲುವಾಗಿ ಸರ್ಕಾರದ ಮುಂದಿನ ಕ್ರಮಗಳೇನು ;

(ಊ) ಪ್ರಸ್ತುತ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದು, ಮಲೆನಾಡು ಭಾಗಕ್ಕೆ ೫೦ ಮತ್ತು ಇತರೆ ಜಿಲ್ಲೆಗಳಲ್ಲಿ ೧೦೦ ವಿದ್ಯಾರ್ಥಿಗಳು ಇರುವ ಕಡೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ಹೆಚ್ಚುವರಿ ಎಂದು ಪರಿಗಣಿಸದೆ ಮಕ್ಕಳ ಸಂಖ್ಯೆಯನ್ನು ೫೦-೧೦೦ಕ್ಕೆ ಮರುನಿಗದಿ ಮಾಡುವ ಸಂಬಂಧ ಸರ್ಕಾರದ ಕ್ರಮಗಳೇನು ;

(ಋ) ದೈಹಿಕ ಶಿಕ್ಷಣ ಶಿಕ್ಷಕರಿಗೂ ಸಹ ಆರೋಗ್ಯ, ವಯೋಮಿತಿ ಮತ್ತು ಇತರೆ ಕಾರಣಗಳಿಂದ ನೀಡುವ ವಿನಾಯಿತಿಗಳನ್ನು ನೀಡಿ ದೈಹಿಕ ಶಿಕ್ಷಣ ಶಿಕ್ಷಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರದ ಮುಂದಿನ ಹೆಜ್ಜೆಗಳೇನು; ಹಾಗೂ ಇದರ ಕಾಲಮಿತಿ ಎಷ್ಟು ?

## ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಬೋಧಕರ ಕೊರತೆ ಕುರಿತು

**ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) –**

೭೩ (೭೮೫) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ–ಮಹಾರಾಷ್ಟ್ರ ಗಡಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಈ ಶಾಲೆಗಳಲ್ಲಿರುವ ಬೋಧಕರ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು ; ಅದರಲ್ಲಿ ೨೦೨೫ರ ಜೂನ್ ೩೦ರ ತನಕ ನಿವೃತ್ತಿಯಾದ ಬೋಧಕರ ಸಂಖ್ಯೆ ಎಷ್ಟು ; (ಶಾಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಜುಲೈ ೧, ೨೦೨೫ರಂದು ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರ ಸಂಖ್ಯೆ ಎಷ್ಟು ; ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು ; (ಶಾಲಾವಾರು ಮಾಹಿತಿ ಒದಗಿಸುವುದು)

(ಈ) ೨೦೦೦ನೇ ಸಾಲಿನ ನಂತರ ನಿವೃತ್ತರಾದ ಬೋಧಕರ ಹುದ್ದೆಗಳನ್ನು ನೇರ ನೇಮಕಾತಿ ಅಥವಾ ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

(ಉ) ಈ ಬೋಧಕ ಹುದ್ದೆಯ ಕೊರತೆಯ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಹಿಂದಿರುವಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಇಲ್ಲದಿದ್ದಲ್ಲಿ, ಅಲ್ಲಿನ ವಿದ್ಯಾರ್ಥಿಗಳ ಭವಿಷ್ಯವೇನು ;

(ಊ) ಗಡಿಭಾಗದ ಶಾಲೆಗಳ ಸ್ಥಿತಿಗತಿ ಮೂಲಸೌಕರ್ಯ ಮತ್ತು ಬೋಧಕರ ಲಭ್ಯತೆ ಕುರಿತು ಸರ್ಕಾರ ಯಾವುದೇ ಸಮೀಕ್ಷೆ ಅಥವಾ ವಿಶ್ಲೇಷಣಾತ್ಮಕ ಅಧ್ಯಯನ ಕೈಗೊಂಡಿದೆಯೇ ; ಅಥವಾ ಕೈಗೊಳ್ಳಲು ಯೋಜಿಸಿದೆಯೇ ?

## ರಾಮನಗರ ಜಿಲ್ಲೆಯಲ್ಲಿ ಕಾಡಾನೆಗಳ ದಾಳಿ ಕುರಿತು

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೪ (೮೧೨) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಿಂದ ಇಲ್ಲಿಯವರೆಗೆ ರಾಮನಗರ ಜಿಲ್ಲೆಯಲ್ಲಿ ಕಂಡು ಬಂದಿರುವ ಕಾಡಾನೆಗಳ ದಾಳಿ ಪ್ರಕರಣಗಳು ಎಷ್ಟು ; ಈ ಪ್ರಕರಣಗಳಲ್ಲಿ ಮರಣ ಹೊಂದಿರುವವರ ಸಂಖ್ಯೆ ಎಷ್ಟು ; ಊನ/ಗಾಯಗೊಂಡಿರುವವರ ಸಂಖ್ಯೆ ಎಷ್ಟು ; ಪ್ರಕರಣವಾರು ಸಂಪೂರ್ಣ ವಿವರ ನೀಡುವುದು ;

(ಆ) ಕಳೆದ ೦೩ ವರ್ಷಗಳಿಂದ ಇಲ್ಲಿಯವರೆಗೆ ರಾಮನಗರ ಜಿಲ್ಲೆಯಲ್ಲಿ ಕಾಡಾನೆಗಳನ್ನು ಸೆರೆ ಹಿಡಿಯಲು ಎಷ್ಟು ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗಿದೆ ; ಈ ಕಾರ್ಯಾಚರಣೆಗಳಲ್ಲಿ ಸೆರೆ ಹಿಡಿಯಲಾದ ಕಾಡಾನೆಗಳ ಸಂಖ್ಯೆ ಎಷ್ಟು ; ಕಾರ್ಯಾಚರಣೆವಾರು ವಿವರ ನೀಡುವುದು ;

(ಇ) ರಾಮನಗರ ಜಿಲ್ಲೆಯಲ್ಲಿ ಕಾಡಾನೆಗಳು ವಸತಿ ಪ್ರದೇಶಗಳಿಗೆ ಬಾರದಂತೆ ತಡೆಯಲು ಎಷ್ಟು ಕಿ.ಮೀ. ರೈಲ್ವೆ ಬ್ಯಾರಿಕೇಡ್ ತಡೆಗೋಡೆ ಅವಶ್ಯಕವಿದೆ ; ಈ ತಡೆಗೋಡೆ ನಿರ್ಮಾಣಕ್ಕೆ ಅವಶ್ಯಕವಿರುವ ಅನುದಾನವೆಷ್ಟು ; ಇದಕ್ಕಾಗಿ ಸರ್ಕಾರವು ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಇದರಲ್ಲಿ ಇಲ್ಲಿಯವರೆಗೆ ಎಷ್ಟು ಕಿ.ಮೀ. ರೈಲ್ವೆ ಬ್ಯಾರಿಕೇಡ್ ತಡೆಗೋಡೆಯನ್ನು ನಿರ್ಮಾಣ ಮಾಡಲಾಗಿದೆ ; ಸಂಪೂರ್ಣ ವಿವರ ನೀಡುವುದು ?

# ಪ್ರೌಢ ಶಾಲೆಗಳ ಮತ್ತು ಪದವಿಪೂರ್ವ ಕಾಲೇಜುಗಳ ಖಾಲಿ ಹುದ್ದೆಯನ್ನು ಭರ್ತಿ ಮಾಡುವ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) –**

೭೫ (೬೫೫) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಗೆ ಬರುವ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಯಲ್ಲಿ ಬರುವ ಎಲ್ಲಾ ಪ್ರೌಢ ಶಾಲೆಗಳ ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ; ಈ ಪ್ರೌಢ ಶಾಲೆ ಹಾಗೂ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರ ಮತ್ತು ಉಪನ್ಯಾಸಕರುಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)

(ಆ) ಈ ಎಲ್ಲಾ ಪ್ರೌಢ ಶಾಲೆ ಹಾಗೂ ಕಾಲೇಜುಗಳಲ್ಲಿ ವಿಷಯವಾರು ಅನುಗುಣವಾಗಿ ಹುದ್ದೆಯನ್ನು ಮಂಜೂರು ಮಾಡಲಾಗಿದೆಯೇ ;

(ಇ) ಈ ಜಿಲ್ಲೆಗಳಲ್ಲಿ ಶಿಕ್ಷಕರ ಮತ್ತು ಉಪನ್ಯಾಸಕರ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳಿಗೆ ತೊಂದರೆಯಾಗುತ್ತಿದ್ದು ಹಾಗೂ ಶಿಕ್ಷಕರಿಗೆ ಮತ್ತು ಉಪನ್ಯಾಸಕರುಗಳಿಗೆ ಕೆಲಸದ ಕಾರ್ಯಭಾರದ ಒತ್ತಡ ಹೆಚ್ಚುತ್ತಿರುವುದರಿಂದ ಸರ್ಕಾರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮವನ್ನು ಕೈಗೊಂಡಿದೆ ?

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ.259/ಪಿ5

**List of Questions**
**for Oral Answers**

**Total No. of**
**Questions - 15**

# LIST - 5

# KARNATAKA LEGISLATIVE COUNCIL

## ONE HUNDRED AND FIFTY SIXTH SESSION

## Monday, the 18th August, 2025

---

## GROUP - I

1. Minister for Food and Civil Supplies and Consumer Affairs
2. Minister for Energy
3. Minister for Health and Family Welfare
4. Minister for Forest, Ecology and Environment
5. Minister for Medical Education and Skill Development
6. Minister for School Education and Literacy
7. Minister for Higher Education

---

### LARGE NUMBER OF PATIENT VISITS TO SRI JAYADEVA INSTITUTE OF CARDIOVASCULAR SCIENCES AND RESEARCH

**Sri Dinesh Gooligowda (Local Authorities Constituency) -**

61 (740) Will the Minister for Medical Education and Skill Development be pleased to state :-

(a) whether it has come to the notice of the Government that the cardiac problems are being increased in the

State ; if so, the steps taken by the Government to control the cardiac problem ;

(b) the total number of medical officers posts that been sanctioned to Sri Jayadeva Institute of Cardiovascular Sciences and Research ; the number of posts which are lying vacant at present ; (details be furnished)

(c) the measures taken by the Government to fill up the post of medical officers which are lying vacant ;

(d) the total number of security and sanitation staff who are working currently in Sri Jayadeva Institute of Cardiovascular Sciences and Research ; (complete details be furnished)

(e) the number of security and sanitation staffs who are working under various agencies in this Institution and the number of years from which the service is being provided by the said agencies ; (details be furnished)

(f) whether the tender has been invited for providing security and sanitation service to Sri Jayadeva Institute of Cardiovascular Sciences and Research in recent days ; (details be furnished)

(g) the duration of number of years in which the tender would be invited and the particulars of criterias for selecting the agency in the tender ? (complete information be furnished)

## ESTABLISHMENT OF TRAUMA CENTRE IN NANJANGUD TALUK HOSPITAL

**Dr. Yathindra S. (Elected by Legislative Assembly) -**

62 (776) Will the Minister for Health and Family Welfare be pleased to state :-

(a) whether there is an intention of the Government for the commencement of Trauma Centre in Nanjangud taluk hospital ; if so, the details be furnished ;

(b) there is a necessity of the land for the commencement of the Trauma Centre in this taluk centre, the steps taken by the Government in this regard ? (details be furnished)

## TEN HOURS POWER SUPPLY TO THE FARMERS OF SINDHANUR TALUK

**Sri Basanagouda Badarli (Elected by Legislative Assembly) -**

63 (703) Will the Minister for Energy be pleased to state :-

(a) whether the proposal is before the Government for providing 10 hours of uninterrupted power supply to the farmers due to the highest paddy crop is being grown in Sindhanur taluk ;

(b) if so, the timelimit within which the step would be taken in this regard ;

(c) whether the proposal is before the Government to provide the crane to the electricity sub-division of Sindhanur taluk ?

## SUDDEN HEART ATTACK CASES IN THE STATE

**Dr. Dhananjaya Sarji (Graduates' Constituency) -**

64 (693) Will the Minister for Health and Family Welfare be pleased to state :-

(a) whether it has come to the notice of the Government that the sudden heart attack and due to this deaths are being occurred among people under age of 45 years in the Karnataka State ;

(b) the number of heart attack cases and the number of persons who have been deceased thereof during the last 3 years in the State ; (details be furnished)

(c) the death cases are increasing due to the heart attack/ severe heart attack in young adults of the State, the reasons for the same ;

(d) the number of district Government hospitals of the State in which the coronary stent and cardiac bypass

surgery facility is being provided when the heart attack/ severe heart attack has been occurred ;

(e) the public is extremely worried due to the increasing cases of heart attack and cardiac arrest in the State, the steps taken by the Government to create awareness among the public with regard to this serious issue ? (complete details be furnished)

**DELAY IN THE DISTRIBUTION OF NEW RATION CARDS**

**Sri Prathap Simha Nayak K. (Elected by Legislative Assembly) -**

**Dr. Yathindra S. (Elected by Legislative Assembly) -**

65 (637+811) Will the Minister for Food and Civil Supplies and Consumer Affairs be pleased to state :-

(a) even though so many years have been elapsed by submitting application for new ration card by thousands of people in the State, whether it has come to the notice of the Government that lot of problems are being caused due to the non distribution of ration cards to them so far ;

(b) if so, the number of new ration cards that have been distributed during the year 2023-24, 2024-25 and 2025-26 ; (districtwise details be furnished)

(c) thousands of people have submitted the application for new ration card, the reason for not getting new ration card so far ;

(d) the number of applicants who have not received the ration card ; (districtwise details be furnished)

(e) the applicants are being deprived from the Government schemes and their benefits due to non distribution of new ration cards on time, the steps taken by the Government to avoid the same ;

(f) if so, the step taken in this regard; the date on which the step would be taken for the distribution of the same ? (details be furnished)

## PHYSIOTHERAPY SERVICES IN DISTRICT AND TALUK HOSPITALS OF THE STATE

**Sri K. Abdul Jabbar (Elected by Legislative Assembly) -**

66 (723) Will the Minister for Health and Family Welfare be pleased to state :-

(a) the number of district/taluk hospital which are functioning currently in the State ; (district and talukwise information be furnished)

(b) out of the hospitals existing in district and taluks, the number of hospitals which are providing physiotherapy services ;

(c) whether it has come to the notice of the Government that the hardship is being faced by the injured people, illness people and differently abled persons not getting physiotherapy services in most of the hospitals ;

(d) if so, the manner in which the steps would taken by the Government to provide this service in the said district and taluk hospitals ?

## CLOSURE OF NEWLY ESTABLISHED UNIVERSITIES IN VARIOUS DISTRICTS

**Sri H.S. Gopinath (Local Authorities Constituency) -**

67 (755) Will the Minister for Higher Education be pleased to state :-

(a) the total number of Universities in the State ; (details be furnished)

(b) the number of Universities in Bengaluru Urban District ;

(c) the total number of Universities which are coming under the Government ;

(d) the number of new Universities that have been commenced in each district in the previous Government ; the criterias that have been complied

with for the commencement of these Universities ; (details be furnished)

(e) whether the Government has decided to close some of such Universities ; if so, the criterias based on which this decision is being taken ; (details be furnished)

(f) the prevailing impediments to the Government for continuation of the Universities which have all basic facilities including the Government land in respective district in the interest of the students ? (details be furnished)

## NO ELECTRICITY CONNECTION TO HOUSES OF KALAMMANAGAR IN YELLAPUR TALUK

**Sri Shantharama Budna Siddi (Nominated) -**

68 (760) Will the Minister for Energy be pleased to state :-

(a) whether it has come to the notice of the Government that there is no electricity connection to some houses belonging to scheduled tribes and other communities in Kalammanagar of Yellapur Taluks in Uttara Kannada District till date ;

(b) if so, the steps would be taken by the Government to provide the electricity connection to the said houses on priority and the timelimit within which it would be completed ?

## COLLECTION OF EXCESS FEE BY THE PRIVATE UNIVERSITIES

**Sri Govinda Raju (Elected by Legislative Assembly)**

69 (645) Will the Minister for Higher Education be pleased to state:-

(a) whether it has come to the notice of the Government that excess fee is being collected illegally by the Private Universities from the students who have got

admission under 40% of the Government quota seats in the admission of professional courses ;

(b) if so, the action taken by the Government; the fee that has been fixed by V.T.U ; whether the complaints that have been received by the KEA and Government from the students and parents with regard to the excess fee ;

(c) whether it is against to the Karnataka Professional Educational Institutions (regulation of admission and fixation of fee) Act and UGC guidelines with regard to collecting excess fee ;

(d) the details of the action taken against the Institutions that have violated these rules ? (complete details of institutions be furnished)

## REGARDING FREE ADMISSION IN GOVERNMENT SCHOOLS

**Sri M.L. Anil Kumar (Local Authorities Constituency) -**

70 (45) Will the Minister for School Education and Literacy be pleased to state :-

(a) the free education has been provided by the Delhi Government in the Government Schools to all children from 1st to 12th standard without consideration of caste-creed, if the said scheme is introduced in Karnataka, it is helpful to the poor students of rural regions, whether the Government has been contemplated for the same ;

(b) since the number of children in Government schools and colleges is being decreased day by day and all children are getting admission in private schools, the steps taken by the Government to increase the strength of children in Government schools ; (complete information be furnished)

(c) the number of children who have enrolled in Government schools and private schools from

1st to 10th standard from the last 3 years till date ; (yearwise complete information be furnished)

(d) the number of Government schools that have been closed during the last 3 years till date and the number of schools that have been adopted ? (yearwise complete information be furnished)

**REGARDING WILD ANIMALS IN THE STATE**

**Sri Keshava Prasad S. (Elected by Legislative Assembly) -**

71 (784) Will the Minister for Forest, Ecology and Environment be pleased to state :-

(a) it is a delightful fact that the population of wild animals is being increased in the State, the details of census work of this wild animals ; while increasing in the population of wild animals, whether the study of impacts on their movements and food processing has been conducted ; (complete information be furnished)

(b) whether the experts committee has been constituted to frame the permanent schemes by contemplating and discussing for upcoming thirty to fifty years ; out of the measures taken by the Government to face the impacts that have been caused due to increase in the population of human and increase in the population of wild animals, the particular of measure that is helpful for reducing the conflicts more effectively ; (complete information be furnished)

(c) the details of the amount of compensation provided by the Government for the deceased persons in the human-wild animals conflict ; the amount of compensation that has been disbursed in this year and the complete details of the persons be furnished; the particulars of long term schemes that have been taken by the Government to prevent such kinds of incidents from recurring after the recent deaths of five tigers; and the particulars of comprehensive programmes that have been taken by the Government

for the implementation of tiger project ? (complete information be furnished)

**REGARDING THE POST OF PHYSICAL EDUCATION TEACHERS**

**Sri S.L. Bhojegowda (Teachers' Constituency) -**

72 (701) Will the Minister for School Education and Literacy be pleased to state:-

(a) whether the step would be taken by the Government with regard to continuation of the vacant post of physical education teacher in the same district without transferring to other district that have been sanctioned for respective districts during rationalization in the year 2021-22 in the State and the timelimit thereof ;

(b) the physical education teachers are being deprived from the transfer till the end of their service, the stand of the Government with regard to transfer of the said teachers and excess rationalization for them ;

c) the step would be taken by the Government in view of refixation of the posts of physical education teacher for 50-100 students that has been fixed to 200 students from several years and the timelimit thereof ; the timelimit within which the step would be taken by the Government with regard to without constituting district unit and constituting taluk unit by reducing the consideration of student strength in the taluk in the excess procedure ;

(d) only 6772 posts of physical education teachers have been sanctioned and more than 21000 HPS schools are in the State, whether it has come to the notice of the Government that the children of respective taluks are being deprived from the sports activities, tournament and the learning of physical education ;

(e) if so, the further steps of the Government in view of recruiting physical education teachers ;

(f) in recent days the strength of children is decreasing significantly in the Government schools, the steps of the Government with regard to rationalizing the children strength from 50 to 100 without considering physical education teachers as excess where there are 50 students in Malnad Region and 100 students in other districts ;

(g) the further steps of the Government in order to facilitate for physical education teachers by giving exemption from health, age and other reasons even for the physical education teachers; and the timelimit thereof ?

## SHORTAGE OF TEACHERS IN GOVERNMENT AND AIDED SCHOOLS

**Dr. M.G. Muley (Elected by Legislative Assembly) -**

73 (785) Will the Minister for School Education and Literacy be pleased to state :-

(a) the number of Government and aided schools which are functioning in the Karnataka-Maharashtra border area ; (districtwise information be furnished)

(b) the total number of posts of teachers in these schools; out of which, the number of teachers who have been retired upto 30th June 2025; (schoolwise complete information be furnished)

(c) the number of teachers who are working in the Government and aided schools as on 1st July 2025 ; the number of teachers posts which are vacant ; (schoolwise information be furnished)

(d) the steps taken by the Government to fill up the posts which are laying vacant from superannuation of teachers by direct recruitment or on contract basis after the year 2000 ;

(e) the steps taken by the Government to prevent the backwardness in the learning process of students in

view of shortage of these teacher post ; if not, the future of the students therein ;

(f) whether any survey or analytical study have been conducted by the Government with regard to condition of schools infrastructure and availability of teacher in border areas ; or whether any plan to undertake the same?

**ATTACK OF WILD ELEPHANTS IN RAMANAGAR DISTRICT**

**Sri S. Ravi (Local Authorities Constituency) -**

74 (812) Will the Minister for Forest, Ecology and Environment be pleased to state:-

(a) the number of wild elephants attack cases that have been reported in Ramanagar district from last 3 years till date; the number of persons who have decased in these cases; the number of people who have disabled /injured; casewise complete details be furnished ;

(b) the number of operations that have been carried out to capture the wild elephants in Ramanagar district from the last 3 years till date ; the number of wild elephants that have been captured in these operations; operationwise details be furnished ;

(c) the length of kilometer of railway barricade fence that is required to prevent the wild elephants entry into human habitats in Ramanagar district; the grant that is required for the construction of this barricade fence ; the grant that has been released by the Government for the same till date ; out of which, the length of kilometers of railway barricade fence that has been constructed so far; complete details be furnished ?

## FILL UP OF THE VACANT POSTS OF SECONDARY SCHOOLS AND PRE-UNIVERSITY COLLEGES

**Sri K.Vivekananda (Teachers' Constituency) -**

75 (655) Will the Minister for School Education and Literacy be pleased to state :-

a) the number of Secondary Schools and Pre-university Colleges in Mysuru, Mandya, Hassan, Chamarajanagar ; (talukwise detailed information be furnished)

(b) whether the subjectwise posts have been sanctioned districts which are coming in the limit of South Teachers' Constituency; the number of teachers and lecturers posts which are lying vacant in these secondary schools and colleges in all these secondary schools and colleges ;

(c) since the hardship is being caused to students and their studies due to the teachers and lecturers posts are lying vacant in these districts and thereby increasing the pressure of work load for teachers and lecturers, the steps taken by the Government to fill up the vacant posts ?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, PWS-259-Bengaluru, P2